


ವೆನಿಸ್‌ನ ವರ್ತಕ
The Merchant of Venice
ಸಪ್ನ
logi


ವೆನಿಸ್‌ನ ವರ್ತಕ
The Merchant of Venice
ಸಪ್ನ
logi

*A Shakespeare Children's Story*
**The Merchant of Venice**
Translated to Kannada by : L.S. Seshagiri Rao
(KB - 2394)

Published by :
**Sapna Book House (P) Ltd.,**
R.O. #11, 3rd Main Road,
Gandhinagar, Bengaluru- 560 009
Ph: 080-40114455

ISBN : 978-93-87308-01-5

**First Edition : 2017**

Pages : 64
Book Size : 1/8th Demi
Paper Used : 18.6 kg (70 gsm) N.S. Maplitho

Copyright © Macaw Books, 2012
*Licensor :*
**Sweet Cherry Publishing Limited, 2015**
Unit E, Vulcan Business Complex,
Vulcan Road,
Leicester, LE5 3EB,
United Kingdom

*Licensee :*
**Sapna Book House (P) Ltd., India 2015**

All rights reserved. No part of this publication may be reproduced or utilized in any form or by any means, electronic or mechanical, including photocopying, recording, or using any information storage and retrieval system, without prior permission in writing from the publisher.



## ವಿಲಿಯಂ ಷೇಕ್ಸ್‌ಪಿಯರ್

ಇಂಗ್ಲಿಷ್ ಭಾಷೆಯಲ್ಲಿ ಅತ್ಯಂತ ಶ್ರೇಷ್ಠ ಬರಹಗಾರ ಎನಿಸಿಕೊಂಡ ವಿಲಿಯಂ ಷೇಕ್ಸ್‌ಪಿಯರ್ ಇಂಗ್ಲೆಂಡ್‌ನ ವಾರ್‌ವಿಕ್‌ಷೈರ್‌ನಲ್ಲಿರುವ ಸ್ಟ್ರಾಟ್‌ಫರ್ಡ್-ಅನ್-ಏವನ್‌ನಲ್ಲಿ (ಸುಮಾರು 1564ರ ಏಪ್ರಿಲ್ 23ರಂದು) ಹುಟ್ಟಿದ. ಜಾನ್ ಮತ್ತು ಮೇರಿ ಷೇಕ್ಸ್‌ಪಿಯರ್ ದಂಪತಿಗಳ ಎಂಟು ಮಕ್ಕಳಲ್ಲಿ ಇವನು ಮೂರನೆಯವನು.

ಷೇಕ್ಸ್‌ಪಿಯರ್ ಕವಿ, ರಂಗಭೂಮಿಗೆ ನಾಟಕಗಳನ್ನು ಬರೆದವನು ಮತ್ತು ನಾಟಕಕಾರ. ಅವನನ್ನು ಇಂಗ್ಲೆಂಡ್‌ನ ರಾಷ್ಟ್ರಕವಿ ಎಂದೂ 'ಏವನ್‌ನ ಕವಿ' ಎಂದೂ ಕರೆಯುತ್ತಾರೆ. ಅವನು 38 ನಾಟಕಗಳನ್ನು, 154 ಸುನೀತಗಳನ್ನು, ಎರಡು ದೀರ್ಘ ವೃತ್ತಾಂತ ಕವನಗಳನ್ನು ಬರೆದನೆಂದು ಹೇಳುತ್ತಾರೆ. ಷೇಕ್ಸ್‌ಪಿಯರ್ ನಾಟಕಗಳನ್ನು ಜಗತ್ತಿನಲ್ಲಿ ಬಳಕೆಯಲ್ಲಿರುವ ಪ್ರತಿಯೊಂದು ಭಾಷೆಗೂ ಅನುವಾದ ಮಾಡಿದ್ದಾರೆ. ಜಗತ್ತಿನ ಬೇರಾವುದೇ ನಾಟಕಕಾರನ ನಾಟಕಗಳಿಗಿಂತ ಇವನ ನಾಟಕಗಳು ಹೆಚ್ಚು ಅಭಿನಯವಾಗುತ್ತಿವೆ.



ಷೈಲಾಕ್ : ಇವನು ಯಹೂದ್ಯರ ಮತಕ್ಕೆ ಸೇರಿದ ಲೇವಾದೇವಿಗಾರ. ಬಹಳ ಬುದ್ಧಿವಂತ ಮತ್ತು ಕುಯುಕ್ತಿವಂತ; ಅವನಿಗೆ ಎಲ್ಲರಲ್ಲೂ ಅಸಡ್ಡೆ. ಆ್ಯಂಟೋನಿಯೊ ತೆಗೆದುಕೊಂಡ ಸಾಲವನ್ನು ನಿಶ್ಚಿತ ಕಾಲದಲ್ಲಿ ಹಿಂತಿರುಗಿಸದಿದ್ದರೆ ಆ್ಯಂಟೋನಿಯೊನ ದೇಹದಿಂದ ಒಂದು ಪೌಂಡ್ ಮಾಂಸವನ್ನು ಪಡೆದುಕೊಂಡು ಅವನ ಮೇಲೆ ತನ್ನ ಛಲವನ್ನು ಸಾಧಿಸಿಕೊಳ್ಳಲು ಬಹಳ ಬುದ್ಧಿವಂತಿಕೆಯ ಯೋಜನೆಯನ್ನು ಮಾಡುತ್ತಾನೆ.

ಆ್ಯಂಟೋನಿಯೊ : ಅವನು ಒಬ್ಬ ವ್ಯಾಪಾರಿ ಮತ್ತು ಲೇವಾದೇವಿಗಾರ. ತನ್ನ ಸ್ನೇಹಿತ ಬಸಾನಿಯೊನಲ್ಲಿನ ಪ್ರೀತಿಯಿಂದ ಅವನು ಷೈಲಾಕ್ ಜೊತೆಗೆ ಒಂದು ಒಪ್ಪಂದಕ್ಕೆ ಸಹಿ ಹಾಕುತ್ತಾನೆ.

ಷೈಲಾಕ್‌ನನ್ನು ಯಾರೂ ಇಷ್ಟಪಡುವುದಿಲ್ಲ. ಆದರೆ ಆ್ಯಂಟೋನಿಯೊ ಎಂದರೆ ಎಲ್ಲರಿಗೂ ಪ್ರೀತಿ.



ಬಸಾನಿಯೊ : ಇವನೊಬ್ಬ ಗೌರವಾನ್ವಿತ ವ್ಯಕ್ತಿ, ಆ್ಯಂಟೋನಿಯೊನ ಸ್ನೇಹಿತ. ಇವನು ಆ್ಯಂಟೋನಿಯೊ ಮೂಲಕ ಷೈಲಾಕ್‌ನಿಂದ ಹಣವನ್ನು ಸಾಲ ಪಡೆದುಕೊಳ್ಳುತ್ತಾನೆ. ಸ್ವಲ್ಪ ಕಾಲವಾದ ಮೇಲೆ ಬಸಾನಿಯೊ ತನ್ನ ಸ್ನೇಹಿತ ಆ್ಯಂಟೋನಿಯೊನ ನೆರವಿಗೆ ಬಂದರೂ ಇವನಿಂದ ಹೆಚ್ಚು ಸಹಾಯವೇನೂ ಆಗುವುದಿಲ್ಲ.






ಪೋರ್ಷಿಯ : ಇವಳು ಒಬ್ಬ ಶ್ರೀಮಂತಳು. ಬಸಾನಿಯೊನ ಹೆಂಡತಿ. ಷೈಲಾಕ್‌ನಿಗೆ ಆ್ಯಂಟೋನಿಯೊನನ್ನು ಕ್ಷಮಿಸುವ ಉದ್ದೇಶವೇ ಇಲ್ಲದಿದ್ದರೂ ಒಬ್ಬ ಗಂಡಸು ವಕೀಲನಂತೆ ವೇಷ ಧರಿಸಿ ಷೈಲಾಕನು ಆ್ಯಂಟೋನಿಯೊನನ್ನು ಕ್ಷಮಿಸುವಂತೆ ಉಪಾಯ ಮಾಡುತ್ತಾಳೆ. ಇವಳು ಸುಂದರಿ, ಜಾಣೆ ಮತ್ತು ಬುದ್ಧಿವಂತಳು.

## ದ ಮರ್ಚೆಂಟ್ ಆಫ್ ವೆನಿಸ್

ಒಂದಾನೊಂದು ಕಾಲದಲ್ಲಿ ವೆನಿಸ್‌ನಲ್ಲಿ ಷೈಲಾಕ್ ಎನ್ನುವ ಯಹೂದ್ಯನಿದ್ದನು. ಜನರಿಗೆ ಹಣದ ಅವಶ್ಯಕತೆಯಾದಾಗ ಅವರು ಷೈಲಾಕ್‌ನ ಬಳಿಗೆ ಹೋಗುತ್ತಿದ್ದರು;






ಅವನು ಅವರು ಕೇಳಿದಷ್ಟು ಹಣವನ್ನು ಕೊಡುತ್ತಿದ್ದ - ಆದರೆ ಹಣವನ್ನು ಯಾವ ದಿನಾಂಕದ ಒಳಗೆ ಕೊಡಬೇಕೆಂದು ಹೇಳುತ್ತಿದ್ದ ಮತ್ತು ವಿಪರೀತ ಬಡ್ಡಿಯನ್ನು ವಸೂಲು ಮಾಡುತ್ತಿದ್ದ.

ಈ ಕಾರಣದಿಂದ ಆ ಊರಿನಲ್ಲಿದ್ದ ಬಹುಮಂದಿಗೆ ಷೈಲಾಕ್‌ನನ್ನು ಕಂಡರೆ ಆಗುತ್ತಿರಲಿಲ್ಲ. ಆದರೆ ಅವನ ಬಹಳ ದೊಡ್ಡ ಶತ್ರುವೆಂದರೆ ಆ್ಯಂಟೋನಿಯೊ ಎನ್ನುವವನು;

ಅವನು ಬಹಳ ಉದಾತ್ತ ಸ್ವಭಾವದವನು. ಜನರು ಕೇಳಿದಾಗ ಷೈಲಾಕನಂತೆ ಆ್ಯಂಟೋನಿಯೊ ಸಹ ಹಣವನ್ನು ಸಾಲವಾಗಿ ಕೊಡುತ್ತಿದ್ದ. ಆದರೆ ಅವರು ತನ್ನ ಹಣ ಕೊಡುವಂತೆ ಅವನು ಅಟ್ಟಿಸಿಕೊಂಡು ಹೋಗುತ್ತಿರಲಿಲ್ಲ, ಬಡ್ಡಿಯನ್ನು ವಸೂಲು ಮಾಡುತ್ತಿರಲಿಲ್ಲ. ಇದರಿಂದ ವೆನಿಸ್ ನಗರದ ಬೀದಿಗಳಲ್ಲಿ ಆ್ಯಂಟೋನಿಯೊ ಷೈಲಾಕನನ್ನು ಕಂಡಾಗ





ಅವನನ್ನು ಅಪಮಾನಗೊಳಿಸಲು ಸಾಧ್ಯವಾದ ಎಲ್ಲ ಪ್ರಯತ್ನವನ್ನು ಆ್ಯಂಟೋನಿಯೊ ಮಾಡುತ್ತಿದ್ದ. ಷೈಲಾಕನು ಬಹು ಬುದ್ಧಿವಂತಿಕೆಯಿಂದ ಲೆಕ್ಕ ಹಾಕುತ್ತಿದ್ದ ಮನುಷ್ಯ, ಅವನು ಆ್ಯಂಟೋನಿಯೊಗೆ ಅತಿಯಾಗಿ ಏನನ್ನೂ ಹೇಳುತ್ತಿರಲಿಲ್ಲ, ಆದರೆ ಅವನಿಗೆ ಅಪಮಾನ ಮಾಡಲು ಸರಿಯಾದ ಅವಕಾಶಕ್ಕಾಗಿ ಕಾಯುತ್ತಿದ್ದ.

ಆ್ಯಂಟೋನಿಯೊ ವೆನಿಸಿನಲ್ಲಿ ಅತ್ಯಂತ ದಯೆಯ ಸ್ವಭಾವದವನು. ಅವನ ಸ್ನೇಹಿತರಲ್ಲಿ ಒಬ್ಬನು ಅವನಿಗೆ ಬಹಳ ಸಮೀಪವಾಗಿದ್ದ. ಅವರು ಸ್ನೇಹಿತರಿಗಿಂತ ಹೆಚ್ಚಾಗಿ ಅಣ್ಣತಮ್ಮಂದಿರಂತಿದ್ದರು.



ಆದರೆ ಉದಾತ್ತ ಸ್ವಭಾವದ ಬಸಾನಿಯೊನಲ್ಲಿ ಒಂದು ಕೆಟ್ಟ ಗುಣವಿತ್ತು - ತನ್ನ ಆದಾಯದಲ್ಲಿಯೇ ಬದುಕುವುದು ಅವನಿಗೆ ಸಾಧ್ಯವಿರಲಿಲ್ಲ. ಯಾವಾಗಲೂ ಅವನ ಜೇಬಿನಲ್ಲಿದ್ದ ಹಣಕ್ಕಿಂತ ಹೆಚ್ಚು ಹಣವನ್ನು ಖರ್ಚುಮಾಡುತ್ತಿದ್ದ. ಯಾವಾಗಲೂ ಹಣಕ್ಕೋಸ್ಕರ ಅವನು ಆ್ಯಂಟೋನಿಯೊ ಬಳಿಗೆ ಬರಲೇಬೇಕಾಗಿತ್ತು. ಇದರಿಂದ ಆ್ಯಂಟೋನಿಯೊಗೆ ಬೇಸರವೇನೂ ಆಗುತ್ತಿರಲಿಲ್ಲ.

ಒಂದು ದಿನ ಬಸಾನಿಯೊ ಆ್ಯಂಟೋನಿಯೊನ ಮನೆಗೆ ಬಂದು ತನ್ನ ಐಶ್ವರ್ಯವನ್ನು ಮತ್ತೆ ಪಡೆದುಕೊಳ್ಳಲು ಒಂದು ದಾರಿಯನ್ನು ಕಂಡುಕೊಂಡಿದ್ದೇನೆ ಎಂದು ಹೇಳಿದ. ಪೋರ್ಷಿಯ ಎಂಬ ಉದಾತ್ತ ಸ್ವಭಾವದ ಯುವತಿಯೊಬ್ಬಳು ಬಹು ಶ್ರೀಮಂತ ತಂದೆಯ ಉತ್ತರಾಧಿಕಾರಿಯಾಗಿದ್ದಳು. ಅವಳಲ್ಲಿ ಅವನಿಗೆ ಪ್ರೇಮವುಂಟಾಗಿತ್ತು. ಅವನಿಗೆ ಪೋರ್ಷಿಯಳ ತಂದೆಯ ಪರಿಚಯವಿತ್ತು. ಅವರ ಮನೆಗೆ ಹೋದಾಗಲೆಲ್ಲಾ ಬಸಾನಿಯೊ

ಪೋರ್ಷಿಯಳನ್ನು ನೋಡುತ್ತಿದ್ದ. ದಿನಗಳು ಕಳೆದಂತೆ ಅವರು ಪ್ರೇಮಿಗಳಾದರು. ಆದರೆ ಪೋರ್ಷಿಯಳ ತಂದೆ ಕೆಲವೇ ದಿನಗಳ ಮೊದಲು ತೀರಿಕೊಂಡಿದ್ದ, ಅವನ ಆಸ್ತಿಯೆಲ್ಲ ಪೋರ್ಷಿಯಳಿಗೆ ಬಂದಿತು. ತಾನು ಹೋಗಿ ಅವಳಿಗೆ ತನ್ನ ಪ್ರೇಮವನ್ನು ಹೇಳಿಕೊಂಡು ತನ್ನನ್ನು ಮದುವೆಯಾಗುವಂತೆ ಕೇಳಿಕೊಳ್ಳಲು ಬಸಾನಿಯೊ ನಿರ್ಧರಿಸಿದ್ದ. ಆದರೆ ಒಂದು ಸಮಸ್ಯೆಯಿತ್ತು, ಪೋರ್ಷಿಯಳನ್ನು ನೋಡಲು ಹೋಗುವಾಗ ಅತ್ಯಂತ ಫ್ಯಾಷನ್ನಿನ ಹೊಸ ಉಡುಪುಗಳನ್ನು ಹಾಕಿಕೊಳ್ಳಲು ಅವನು ಬಯಸಿದ. ಎಂದಿನಂತೆ ಅವನ ಹತ್ತಿರ ಹಣ ಇರಲಿಲ್ಲ. ಆ್ಯಂಟೋನಿಯೊನಿಂದ 3000 ಡಕೆಟ್‌ಗಳ ಸಾಲವನ್ನು ಪಡೆಯಲು ಅವನು ಬಂದಿದ್ದ.





ಬಸಾನಿಯೊನ ಮಾತುಗಳನ್ನು ಕೇಳಿ ಆ್ಯಂಟೋನಿಯೊಗೆ ಬಹಳ ಸಂತೋಷವಾಯಿತು. ಆದರೆ ಆಗ ಅವನ ಬಳಿ ಅಷ್ಟು ಹಣ ಇರಲಿಲ್ಲ. ಅವನ ಹಲವು ಹಡಗುಗಳು ವ್ಯಾಪಾರದ ಪ್ರಯಾಣವನ್ನು ಮುಗಿಸಿ ಕೆಲವೇ ದಿನಗಳಲ್ಲಿ ಹಿಂದಿರುಗಬೇಕಾಗಿತ್ತು. ಆಗ ಅವನ ಬಳಿ ಬೇಕಾದಷ್ಟು ಹಣ ಶೇಖರವಾಗುತ್ತಿತ್ತು. ಅವನ ಸ್ನೇಹಿತನಿಗೆ ಸಾಲ ಕೊಡಲು ತಕ್ಕಷ್ಟು ಹಣ ಇರುತ್ತಿತ್ತು.





ಆದರೆ ಅಲ್ಲಿಯವರೆಗೆ ಈ ವಿಷಯದಲ್ಲಿ ಕಾಯುವುದು ಸಾಧ್ಯವಿರಲಿಲ್ಲ. ಆದ್ದರಿಂದ ಷೈಲಾಕನ ಬಳಿಗೆ ಹೋಗಿ ಅವನಿಂದ ಸಾಲವನ್ನು ಪಡೆದು ಬಸಾನಿಯೊಗೆ ಹಣವನ್ನು ಕೊಡಲು ತೀರ್ಮಾನಿಸಿದ. ಈ ಯೋಜನೆಯನ್ನು ಕೇಳಿದಾಗ ಬಸಾನಿಯೊಗೆ ಸಂತೋಷವಾಗಲಿಲ್ಲ.





ಆದರೆ ಆ್ಯಂಟೋನಿಯೊ ತನ್ನ ಹಡಗುಗಳು ಶೀಘ್ರದಲ್ಲಿಯೇ ಹಿಂದಿರುಗುವುದರಿಂದ ಏನೂ ಸಮಸ್ಯೆಯಾಗುವುದಿಲ್ಲ ಎಂದು ಒತ್ತಿ ಹೇಳಿದ. ಅವರು ಷೈಲಾಕ್‌ನ ಬಳಿಗೆ ಹೋಗಿ ಸಾಲ ಬೇಕೆಂದಾಗ ಷೈಲಾಕ್‌ನಿಗೆ ತಾನು ಕಾಯುತ್ತಿದ್ದ ಸಮಯವು ಬಂದಿತು ಎಂದು ಗೊತ್ತಾಯಿತು. ಅವನು ಆ್ಯಂಟೋನಿಯೊಗೆ, ಆ್ಯಂಟೋನಿಯೊ ಎಲ್ಲರ ಎದುರಿಗೆ ತನಗೆ ಅಪಮಾನ ಮಾಡಿದ್ದರೂ





ತಾವು ಸ್ನೇಹಿತರಾಗಿರಬೇಕೆಂದೇ ತನ್ನ ಬಯಕೆ ಎಂದ. ಆ್ಯಂಟೋನಿಯೊಗೆ ತುಂಬಾ ಆಶ್ಚರ್ಯವಾಯಿತು. ಷೈಲಾಕನು ಮುಂದುವರೆದು ತನ್ನ ಸ್ನೇಹಭಾವವನ್ನು ತೋರಿಸಲು ತಾನು ಆ್ಯಂಟೋನಿಯೊಗೆ 3000 ಡಕೆಟ್‌ಗಳನ್ನು ಕೊಡುವುದು ಮಾತ್ರವಲ್ಲ ಅದರ ಮೇಲೆ ಬಡ್ಡಿಯನ್ನೇ ಕೇಳುವುದಿಲ್ಲ ಎಂದ. ಏನಿದ್ದರೂ ಆ್ಯಂಟೋನಿಯೊ


ಅವನ ಜೊತೆಗೆ ಒಬ್ಬ ವಕೀಲನ ಮನೆಗೆ ಹೋಗಿ ಒಂದು ಒಪ್ಪಂದ ಪತ್ರಕ್ಕೆ ಸಹಿ ಮಾಡುವುದಷ್ಟೇ.





ನಿರ್ಧರಿಸಿದ ಕಾಲದೊಳಗೆ ಆ್ಯಂಟೋನಿಯೊ ಹಣವನ್ನು ಹಿಂದಿರುಗಿಸಲು ಸಾಧ್ಯವಾಗದಿದ್ದರೆ ಷೈಲಾಕನು ಆ್ಯಂಟೋನಿಯೊ ದೇಹದಿಂದ ತನಗೆ ಬೇಕಾದ ಭಾಗದಿಂದ ಒಂದು ಪೌಂಡ್ ಮಾಂಸವನ್ನು ತೆಗೆದುಕೊಳ್ಳಬಹುದು ಎಂದು ಒಪ್ಪಂದ ಪತ್ರದಲ್ಲಿ ನಮೂದಿಸಲಾಗುತ್ತಿತ್ತು.

ಈ ಸಲಹೆಯನ್ನು ಕೇಳಿ ಬಸಾನಿಯೊಗೆ ಸಂತೋಷವಾಗಲಿಲ್ಲ. ತನಗಾಗಿ ಆ್ಯಂಟೋನಿಯೊ ಅಪಾಯಕ್ಕೆ ಸಿಲುಕಬಾರದೆಂದು ಬೇಡಿಕೊಂಡನು.









ಆ್ಯಂಟೋನಿಯೊಗೆ ಸದಾ ತಾನು ಯಹೂದ್ಯರ ವಿಷಯದಲ್ಲಿ ತಪ್ಪು ಅಭಿಪ್ರಾಯ ಇಟ್ಟುಕೊಂಡಿದ್ದೆ, ಅವರ ಉದ್ದೇಶಗಳು ಒಳ್ಳೆಯವೇ ಎಂದು ಎನ್ನಿಸಿತು, ಅವನು ಒಪ್ಪಂದ ಪತ್ರಕ್ಕೆ ಸಹಿ ಮಾಡಲು ಕೂಡಲೆ ಒಪ್ಪಿಕೊಂಡ.

ಕಡೆಗೂ ಷೈಲಾಕ್ ಆ್ಯಂಟೋನಿಯೊಗೆ ಹಣವನ್ನು ಕೊಟ್ಟ. ಈ ಹಣದಿಂದ ಬಸಾನಿಯೊ ತನಗಾಗಿ ಒಳ್ಳೆಯ ಫ್ಯಾಷನ್ನಿನ ಉಡುಪುಗಳನ್ನು ಕೊಂಡುಕೊಂಡ.





ಗ್ರೇಷಿಯಾನೊ ಎನ್ನುವ ಗೆಳೆಯನೊಡನೆ ಪೋರ್ಷಿಯಳ ಮನೆಗೆ ಹೊರಟ. ಕೆಲವೇ ಕ್ಷಣಗಳಲ್ಲಿ ಬಸಾನಿಯೊ ತನ್ನ ಮದುವೆಯ ಸಲಹೆಗೆ ಪೋರ್ಷಿಯಳ ಒಪ್ಪಿಗೆಯನ್ನು ಪಡೆದ. ತನ್ನ ಬಳಿ ಇರುವುದೆಲ್ಲ ಒಳ್ಳೆಯ ಕುಟುಂಬದ ಹೆಸರು, ಆದರೆ ಹೆಚ್ಚು ಹಣ ತನ್ನ ಬಳಿ ಇಲ್ಲ ಎಂದು ಆವಳಿಗೆ ಹೇಳಿದ.



ಅವನ ಹೆಂಡತಿಯಾಗುವ ಭಾಗ್ಯಕ್ಕಾಗಿ ಆಗ ತನಗಿದ್ದ ಐಶ್ವರ್ಯದ ಇಪ್ಪತ್ತರಷ್ಟು ಶ್ರೀಮಂತಳಾಗಬೇಕಾಗುತ್ತದೆ ಎಂದಳು. ಬಸಾನಿಯೊಗೆ ತನ್ನ ಉಂಗುರವನ್ನು ಕೊಡುತ್ತಾ ಅವಳು ತನ್ನ ಜೊತೆಗೆ ತನ್ನ ಐಶ್ವರ್ಯವೆಲ್ಲಾ ಅವನಿಗೆ ಸೇರಿದ್ದು ಎಂದಳು.

ಈ ಮಧ್ಯೆ ಗ್ರೇಷಿಯಾನೊ ಪೋರ್ಷಿಯಾಳ





ಒಬ್ಬ ಸಖಿ ನೆರಿಸ್ಸಾಳನ್ನು ಪ್ರೇಮಿಸಿದ. ಪೋರ್ಷಿಯಾ ಮತ್ತು ಬಸಾನಿಯೊ ಪರಸ್ಪರ ಪ್ರೇಮದ ಮಾತುಗಳನ್ನಾಡುತ್ತಿದ್ದಾಗ ಗ್ರೇಷಿಯಾನೊ ಬಂದು ಅವಳನ್ನು ಅಭಿನಂದಿಸಿದ, ನಂತರ ಅವನು ತಾನೂ ಮದುವೆಯಾಗಲು ಬಯಸುವುದಾಗಿ ಹೇಳಿದನು. ನೆರಿಸ್ಸಾಗೆ ತನ್ನನ್ನು ಮದುವೆಯಾಗಲು ಬಹಳ ಆಸೆ, ಬಸಾನಿಯೊನನ್ನು ಪೋರ್ಷಿಯಾ ಮದುವೆಯಾದಾಗ ತನ್ನ ಮದುವೆಯಾಗಬೇಕೆಂದು ಅವಳ ಬಯಕೆ ಎಂದು ಹೇಳಿದ. ಬಸಾನಿಯೊ ಮತ್ತು ಪೋರ್ಷಿಯ, ಗ್ರೇಷಿಯಾನೊ ಮತ್ತು ನೆರಿಸ್ಸಾರನ್ನು ಅಭಿನಂದಿಸಿದರು.

ಹೀಗೆ ಎರಡು ಜೋಡಿಗಳು ಖುಷಿಯಿಂದ ಮಾತನಾಡುತ್ತಿದ್ದಾಗ



ಪೋರ್ಷಿಯ ಮನೆಗೆ ಆತುರಾತುರವಾಗಿ ಒಬ್ಬ ದೂತನು ದುಃಖದ ಸುದ್ದಿಯನ್ನು ಹೊತ್ತು ತಂದ.

ಸ್ವಲ್ಪ ಕಾಲದಲ್ಲಿಯೇ ಹಿಂದಿರುಗಿ ಬರುವುವೆಂದು ನಿರೀಕ್ಷಿಸಿದ್ದ ಆ್ಯಂಟೋನಿಯೊನ ಹಡುಗುಗಳೆಲ್ಲ ಸಮುದ್ರದ ಪಾಲಾಗಿದ್ದವು ಎನ್ನುವ ದುಃಖದ ಸುದ್ದಿಯನ್ನು ತಂದನು. ಈಗ ಆ್ಯಂಟೋನಿಯೊ ನಿರ್ಗತಿಕನಾಗಿದ್ದ.

ಈ ಸುದ್ದಿಯಿಂದ ಬಸಾನಿಯೊ ಕಂಗೆಟ್ಟು ಹೋದ. ಅವನು, ತನಗೆ ಹಣ ಬೇಕಾದಾಗಲೆಲ್ಲ ಆ್ಯಂಟೋನಿಯೊ ಕೊಡುತ್ತಿದ್ದ





ಎನ್ನುವುದನ್ನು ಪೋರ್ಷಿಯಳಿಗೆ ವಿವರಿಸಿದ. ಆ್ಯಂಟೋನಿಯೊ ಮತ್ತು ಯಹೂದ್ಯನ ನಡುವೆ ಆದ ಒಪ್ಪಂದವನ್ನೂ ಹೇಳಿದ.







ಬಸಾನಿಯೊನ ಮುಖವು ಬಿಳುಚಿಕೊಂಡಿದ್ದನ್ನು ನೋಡಿ ಪೋರ್ಷಿಯ ಬಸಾನಿಯೊಗೆ ಕೂಡಲೆ ವೆನಿಸ್‌ಗೆ ಹೋಗಿ ಯಹೂದ್ಯನೊಡನೆ ಆಗಿರುವ ಒಪ್ಪಂದದಿಂದ ಆ್ಯಂಟೋನಿಯೊನನ್ನು ಬಿಡುಗಡೆ ಮಾಡುವಂತೆ ಹೇಳಿದಳು. ಅವಳು ಬಸಾನಿಯೊ ತನ್ನನ್ನು ಕೂಡಲೆ ಮದುವೆಯಾಗಬೇಕು, ಅದರಿಂದ ಅವನಿಗೆ ಕಾನೂನುಬದ್ಧವಾಗಿ ಅವಳ ಹಣದ ಮೇಲೆ ಅಧಿಕಾರ ಬರುತ್ತದೆ, ಆ ಹಣವನ್ನು ಆ್ಯಂಟೋನಿಯೊನನ್ನು ಬಿಡುಗಡೆ ಮಾಡಲು ಬಳಸಬಹುದು ಎಂದು ಒತ್ತಾಯ ಮಾಡಿದಳು.

ಆದ್ದರಿಂದ ಆತುರಾತುರವಾಗಿ ಮದುವೆಯ ಏರ್ಪಾಡು ಮಾಡಿದರು.



ಬಸಾನಿಯೊ ಮತ್ತು ಗ್ರೇಷಿಯಾನೊ ತಮ್ಮ ಪ್ರೇಮದ ವಧುಗಳನ್ನು ಮದುವೆಯಾದರು. ಸ್ವಲ್ಪ ಹೊತ್ತಿನಲ್ಲಿಯೇ ಅವರಿಬ್ಬರೂ ವೆನಿಸಿಗೆ ಹೊರಟರು. ಅಲ್ಲಿಗೆ ತಲುಪಿದಾಗ ಆ್ಯಂಟೋನಿಯೊ ಸೆರೆಮನೆಯಲ್ಲಿದ್ದುದನ್ನು ನೋಡಿ ಬಸಾನಿಯೊಗೆ ಆಘಾತವಾಯಿತು.

ಶೈಲಾಕನ ಹಣವನ್ನು ಹಿಂದಿರುಗಿಸಿ ಆ್ಯಂಟೋನಿಯೊನನ್ನು ಬಿಡುಗಡೆ ಮಾಡಲು ಬಸಾನಿಯೊ ಕೂಡಲೆ ಶೈಲಾಕ್‌ನನ್ನು ಹುಡುಕಿಕೊಂಡು ಹೋದನು. ಇಲ್ಲಿ ಒಂದು ಕಾನೂನಿನ ತೊಡಕಿತ್ತು. ಜಗತ್ತಿನಲ್ಲಿರುವ ಅಷ್ಟು ಬಂಗಾರವನ್ನು ಕೊಟ್ಟರೂ ಬಸಾನಿಯೊ ಆ್ಯಂಟೋನಿಯೊನನ್ನು ಬಿಡಿಸಲು ಸಾಧ್ಯವಿಲ್ಲ ಎನ್ನುವಂತೆ ಕಂಡಿತು. ಏಕೆಂದರೆ



ಆ್ಯಂಟೋನಿಯೊ ಹಣವನ್ನು ಹಿಂದಿರುಗಿಸಲು ಸಾಧ್ಯವಾಗದಿದ್ದರೆ ಶೈಲಾಕ್ ಆ್ಯಂಟೋನಿಯೊನ ದೇಹದ ಯಾವ ಭಾಗದಿಂದಲಾದರೂ ಒಂದು ಪೌಂಡ್ ಮಾಂಸವನ್ನು ತೆಗೆದುಕೊಳ್ಳಬಹುದು ಎಂದು ಒಪ್ಪಂದದ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿತ್ತು. ಆದರಿಂದ ಆ್ಯಂಟೋನಿಯೊನನ್ನು ಉಳಿಸುವುದು ಯಾರಿಗೂ ಸಾಧ್ಯವಿರಲಿಲ್ಲ.






ಆ್ಯಂಟೋನಿಯೊ ಸಾಯಬೇಕು ಎನ್ನುವ ಸ್ಥಿತಿಯಿತ್ತು. ಈ ವಿಷಯವನ್ನು ತೀರ್ಮಾನಿಸಿ ಯಾವ ಶಿಕ್ಷೆ ಕೊಡಬೇಕು ಎನ್ನುವುದನ್ನು ತೀರ್ಮಾನಿಸಲು ವೆನಿಸಿನ ಡ್ಯೂಕನ ಆಸ್ಥಾನದಲ್ಲಿ ದಿನವನ್ನು ಗೊತ್ತು ಮಾಡಲಾಗಿತ್ತು.

ಈ ಮಧ್ಯೆ ಆ್ಯಂಟೋನಿಯೊನ ಸಹಾಯಕ್ಕೆ ಗಂಡನನ್ನು ಕಳುಹಿಸಿದ ಪೋರ್ಷಿಯಾಗೆ ಅವನ ಗೆಳೆಯನನ್ನು ಸೆರೆಯಿಂದ ಬಿಡಿಸಲು

ಬಹಳ ಕಷ್ಟವಾಗುವುದು ಎಂದು ಗೊತ್ತಿತ್ತು. ಆ್ಯಂಟೋನಿಯೊನನ್ನು ಉಳಿಸಲು ತಾನೇನಾದರೂ ಮಾಡಬೇಕು ಎಂದು ಅರ್ಥಮಾಡಿಕೊಂಡಳು. ಕಾಲಹರಣ ಮಾಡದೆ ವೆನಿಸಿಗೆ ಹೊರಟಳು.





ಪೋರ್ಷಿಯಳ ತಂದೆಯ ಒಬ್ಬ ಸ್ನೇಹಿತ ಕಾನೂನಿನಲ್ಲಿ ಬಹಳ ಗಟ್ಟಿಗನಾಗಿದ್ದ. ವಿಷಯವನ್ನು ವಿವರಿಸಿ ಪೋರ್ಷಿಯ ಅವನಿಗೆ ಒಂದು ಕಾಗದವನ್ನು ಬರೆದಳು. ವಕೀಲನು ನ್ಯಾಯಾಲಯದಲ್ಲಿ ಪೋರ್ಷಿಯ ಧರಿಸಲು ತನ್ನ ವಕೀಲನ ಮೇಲುಡುಪನ್ನು ಮತ್ತು ಒಂದು ಕಾಗದವನ್ನು ಕಳುಹಿಸಿದ. ಆ್ಯಂಟೋನಿಯೊನನ್ನು ಬಿಡಿಸಲು ಅವಳು ಏನು ಮಾಡಬೇಕು ಎನ್ನುವುದನ್ನು ಪತ್ರದಲ್ಲಿ ವಿವರಿಸಲಾಗಿತ್ತು.





ಅಂತೂ ಕೊನೆಗೆ ಪೋರ್ಷಿಯ ಗೊತ್ತಾಗಿದ್ದ ಸಮಯಕ್ಕೆ ವಕೀಲನ ಉಡುಪಿನಲ್ಲಿ ನ್ಯಾಯಾಲಯವನ್ನು ತಲುಪಿದಳು. ತನ್ನೊಡನೆ ಗಂಡಸಿನ ಉಡುಪಿನಲ್ಲಿ ವಕೀಲನ ಗುಮಾಸ್ತನಂತೆ ನೆರಿಸ್ಸಾಳನ್ನು ಪೋರ್ಷಿಯ ಕರೆತಂದಿದ್ದಳು.

ಅವರು ಡ್ಯೂಕನ ಆಸ್ಥಾನಕ್ಕೆ ಹೋಗಿ ಪೋರ್ಷಿಯಳ ವಕೀಲನಿಂದ ತಂದ ಒಂದು ಪತ್ರವನ್ನು ಅವನಿಗೆ ಕೊಟ್ಟರು.






ಆ ಪತ್ರದಲ್ಲಿ ವಕೀಲನು ತನಗೆ ಆರೋಗ್ಯವಿಲ್ಲದ್ದರಿಂದ ತನ್ನ ಪರವಾಗಿ ಇಬ್ಬರು ವಕೀಲರನ್ನು ಕಳುಹಿಸುತ್ತಿರುವುದಾಗಿ ಬರೆದಿದ್ದ.

ಪ್ರಾರಂಭದಲ್ಲಿ ಪೋರ್ಷಿಯ ಷೈಲಾಕನೊಡನೆ ನ್ಯಾಯವಾಗಿ ವಾದಿಸಲು ಪ್ರಯತ್ನಿಸಿದಳು. ದಯೆ ತೋರಿಸಿ ಒಪ್ಪಂದದ ವಿಷಯವನ್ನು ಸಂಪೂರ್ಣವಾಗಿ ಮರೆತು ಬಿಡುವಂತೆ ಅವನನ್ನು ಬೇಡಿಕೊಂಡಳು.










ಕರುಣೆಯು ಅದನ್ನು ನೀಡುವವನಿಗೂ ಪಡೆಯುವವನಿಗೂ ನೆರವಾಗುತ್ತದೆ ಎಂದು ಷೈಲಾಕನಿಗೆ ಹೇಳಿದಳು. ಆದರೆ ಯಾತರಿಂದಲೂ ಷೈಲಾಕನ ಮನಸ್ಸು ಬದಲಾಗಲಿಲ್ಲ. ಒಪ್ಪಂದದ ಪತ್ರದಲ್ಲಿದ್ದಂತೆ ಆ್ಯಂಟೋನಿಯೊನ ದೇಹದಿಂದ ಒಂದು ಪೌಂಡ್ ಮಾಂಸವನ್ನು ತೆಗೆದುಕೊಳ್ಳಲು ಅವಕಾಶ ಕೊಡಬೇಕೆಂದು ಹಟ ಹಿಡಿದನು. ಬೇರೆ ಮಾತೇ ಬೇಡವೆಂದು ಹೇಳಿಬಿಟ್ಟ.






ಬಸಾನಿಯೊ ಸಹ ಆ್ಯಂಟೋನಿಯೊ ಪರ ಮಾತನಾಡಿ ತೀರ್ಮಾನವನ್ನು ಮತ್ತೆ ಯೋಚಿಸುವಂತೆ ಷೈಲಾಕ್‌ಗೆ ಹೇಳಿದ. ಆ ಕ್ಷಣವೇ ಷೈಲಾಕ್‌ನಿಗೆ ಅಷ್ಟು ಹಣವನ್ನು ಕೊಡಲು ಸಿದ್ಧ ಎಂದು ಹೇಳಿದ. ಷೈಲಾಕನು ಒಂದು ಪೌಂಡ್ ಮಾಂಸವನ್ನು ಬಿಟ್ಟು ಬೇರೇನನ್ನೂ ತೆಗೆದುಕೊಳ್ಳಲು ಒಪ್ಪುವುದಿಲ್ಲ.




ಅಂದರೆ ಕಾನೂನಿನ ಪ್ರಕಾರ ಆದ ಒಪ್ಪಂದವನ್ನು ಹಾಗೆ
ಹೇಳಬಹುದು ಎಂದ.

ಆಂಟೋನಿಯೊನ ದೇಹದಿಂದ ಷೈಲಾಕನು ಒಂದು ಪೌಂಡ್ ಮಾಂಸವನ್ನು ಕತ್ತರಿಸಿಕೊಳ್ಳುವಾಗ ಒಬ್ಬ ವೈದ್ಯನಾದರೂ ಇರಬಹುದೆ ಎಂದು ಪೋರ್ಷಿಯ ನ್ಯಾಯಮೂರ್ತಿಯನ್ನು ಕೇಳಿದಳು. ರಕ್ತಸ್ರಾವದಿಂದ ಆಂಟೋನಿಯೊ ಸತ್ತುಹೋಗಬಹುದು ಎಂದು ಹೇಳಿದಳು.




ಆದರೆ ಷೈಲಾಕನಿಗೆ ಬೇಕಾಗಿದ್ದುದು ಅದೇ. ಆದುದರಿಂದ ಅವನು ಹಾಗೆಂದು ಒಪ್ಪಂದ ಪತ್ರದಲ್ಲಿ ಬರೆದಿರಲಿಲ್ಲ. ಆದುದರಿಂದ ಷೈಲಾಕನು ಒಪ್ಪಂದದಲ್ಲಿ ಸೂಚಿಸಿದ್ದ ತನ್ನ ಪಾತ್ರವನ್ನು ನಿರ್ವಹಿಸುವಾಗ ವೈದ್ಯನು ಇರುವುದಿಲ್ಲ ಎಂದು ಹೇಳಿದನು.

ಕಡೆಗೆ ಪೋರ್ಷಿಯಳಿಗೆ ಷೈಲಾಕನ ಸಲಹೆಯಂತೆ ನಡೆಯುವುದನ್ನು ಬಿಟ್ಟು ಬೇರೆ ದಾರಿಯಿರಲಿಲ್ಲ, ಕಾನೂನಿಗೆ ಹೊಸ ಅರ್ಥ ಕೊಡಲು ಬರುವುದಿಲ್ಲ, ಷೈಲಾಕನಿಗೆ ತನ್ನ ಪೌಂಡ್ ಮಾಂಸವನ್ನು ಕೇಳಲು ಹಕ್ಕಿದೆ ಎಂದು ಹೇಳಿದಳು.

ಅವಳು ಷೈಲಾಕನೆಡೆಗೆ ತಿರುಗಿ,






"ನಿನ್ನ ಒಂದು ಪೌಂಡ್ ಮಾಂಸವನ್ನು ತೆಗೆದುಕೊ, ಆದರೆ ಒಂದು ಹನಿ ರಕ್ತವೂ ಕೆಳಕ್ಕೆ ಬೀಳಕೂಡದು. ಜ್ಞಾಪಕವಿಟ್ಟುಕೊ, ನೀನು ಸರಿಯಾಗಿ ಒಂದು ಪೌಂಡ್ ಮಾಂಸವನ್ನು ಮಾತ್ರ ತೆಗೆದುಕೊಳ್ಳಬೇಕು, ಒಂದಿಷ್ಟು ಹೆಚ್ಚಾಗಬಾರದು, ಕಡಿಮೆಯಾಗಬಾರದು," ಎಂದಳು.

ಈಗ ಷೈಲಾಕನಿಗೆ ಕಷ್ಟದ ಸ್ಥಿತಿ ಬಂದಿತು.



ಒಂದು ಹನಿ ರಕ್ತವೂ ಬೀಳದಂತೆ ಆ್ಯಂಟೋನಿಯೊನ ದೇಹದ ಚೂರು ಕತ್ತರಿಸಿಕೊಳ್ಳುವುದು ಹೇಗೆ? ಸರಿಯಾಗಿ ಒಂದು ಪೌಂಡ್ ಮಾಂಸವನ್ನು ಸ್ವಲ್ಪವೂ ಹೆಚ್ಚುಕಡಿಮೆಯಿಲ್ಲದ ಕತ್ತರಿಸುವುದು ಹೇಗೆ? ಆದರೆ ಪೋರ್ಷಿಯ, ಒಪ್ಪಂದ ಪತ್ರದಲ್ಲಿ ಒಂದು ಪೌಂಡ್ ಮಾಂಸವನ್ನು ಮಾತ್ರ ತೆಗೆದುಕೊಳ್ಳಬೇಕು ಎಂದು ಹೇಳಿತ್ತು, ಮತ್ತೇನನ್ನು ಹೇಳಿರಲಿಲ್ಲ ಎಂದು ಹಟ ಹಿಡಿದಳು. ಶೈಲಾಕ್‌ನು ಒಪ್ಪಂದದಲ್ಲಿ ತನ್ನ ಪಾತ್ರದಂತೆ ನಡೆದುಕೊಳ್ಳಲು ಆಗದಿದ್ದರೆ ಅವನ ಆಸ್ತಿಯಲ್ಲಿ ಅರ್ಧಭಾಗ ಆ್ಯಂಟೋನಿಯೊಗೆ ಹೋಗುತ್ತದೆ.





ಮತ್ತು ಉಳಿದ ಅರ್ಧಭಾಗವನ್ನು ಶೈಲಾಕ್‌ನಿಗೆ ಶಿಕ್ಷೆ ಎಂದು ವೆನಿಸ್ ರಾಜ್ಯಕ್ಕೆ ಕೊಡಲಾಗುತ್ತದೆ ಎಂದು ಹೇಳಿದಳು.

ಈಗ ಶೈಲಾಕ್ ತಪ್ಪಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ. ಏನು ಮಾಡಬೇಕೆಂದು ಅವನಿಗೆ ತಿಳಿಯಲಿಲ್ಲ. ತನ್ನ ಹಣವನ್ನಷ್ಟೇ ಕೊಟ್ಟರೂ ತನಗೆ ಸಾಕು, ಸಮಾಧಾನದಿಂದ ಇರುತ್ತೇನೆ ಎಂದು ಹೇಳಲು ಪ್ರಯತ್ನಿಸಿದ. ಆದರೆ ಆಗಲೆ ಶೈಲಾಕನೇ ಹೇಳಿದ್ದಂತೆ ಹಣದ ಪ್ರಶ್ನೆ ಪ್ರಸ್ತುತವಲ್ಲ ಎಂದು ಪೋರ್ಷಿಯ ಜ್ಞಾಪಿಸಿದಳು.



ಹಾಗೆ ಕೊಡಬೇಕೆಂದು ತೀರ್ಮಾನಿಸಿದ ಶೈಲಾಕನ ಅರ್ಧ ಆಸ್ತಿಯನ್ನು ಅವನ ಮಗಳಿಗೆ ಕೊಟ್ಟರೆ ತನಗೆ ತೃಪ್ತಿ ಎಂದು ಆ್ಯಂಟೋನಿಯೊ ಹೇಳಿದ. ಶೈಲಾಕ್‌ನ ಮಗಳು ಒಬ್ಬ ಕ್ರೈಸ್ತನನ್ನು ಮದುವೆಯಾಗಿದ್ದಳು. ಇದರಿಂದ ಶೈಲಾಕನು ತನ್ನ ಉಯಿಲಿನಲ್ಲಿ





ಅವಳಿಗೆ ಏನೂ ಕೊಟ್ಟಿರಲಿಲ್ಲ ಎಂದು ಆ್ಯಂಟೋನಿಯೊಗೆ ತಿಳಿದಿತ್ತು.

ಶೈಲಾಕನು ಒಂದು ಮಾತನ್ನೂ ಆಡುವ ಸ್ಥಿತಿಯಲ್ಲಿರಲಿಲ್ಲ. ತನಗೆ ಆರೋಗ್ಯವಿಲ್ಲ, ತಾನು ಹೋಗಲು ಅಪ್ಪಣೆ ಕೊಡಬೇಕು ಎಂದು ನ್ಯಾಯಾಸ್ಥಾನಕ್ಕೆ ಹೇಳಿದ. ಹೊಸದೊಂದು ಒಪ್ಪಂದ ಪತ್ರವನ್ನು ಬರೆದು ತನಗೆ ಕಳುಹಿಸಬೇಕೆಂದೂ






ತಾನು ಅದಕ್ಕೆ ಮನೆಯಲ್ಲಿ ಸಹಿ ಮಾಡುವುದಾಗಿ ಹೇಳಿದ. ಹೀಗೆ ಈ ದುಷ್ಟ ಲೇವಾದೇವಿಗಾರನು ತರುಣ ವಕೀಲನ ಬುದ್ಧಿವಂತಿಕೆಯ ಮುಂದೆ ಸೋಲಬೇಕಾಯಿತು.


ಡ್ಯೂಕನು ಆ್ಯಂಟೋನಿಯೊನನ್ನು ಬಂಧನದಿಂದ ಬಿಡಿಸಿದ ಮತ್ತು ತನ್ನ ಪ್ರಯತ್ನಗಳಿಂದ ಆ್ಯಂಟೋನಿಯೊನನ್ನು ಬಿಡಿಸಿದ್ದ ತರುಣ ವಕೀಲನನ್ನು ಹೊಗಳಿದ. ತರುಣನಿಗೆ ಮೂರು ಸಾವಿರ ಡಕೆಟ್‌ಗಳನ್ನು ಕೊಡುವಂತೆ ಬಸಾನಿಯೊ ಮತ್ತು ಆ್ಯಂಟೋನಿಯೊಗೆ ಹೇಳಿದ. ಬಸಾನಿಯೊ ಕೂಡಲೆ ಒಪ್ಪಿದ. ಆದರೆ ಪೋರ್ಷಿಯ ತನಗೆ ಹಣ ಬೇಡವೆಂದಳು.





ಆದರೆ ಬಸಾನಿಯೊ ತನ್ನ ಕೈ ಗವಸನ್ನು ತೆಗೆದಾಗ ತಮ್ಮ ಮದುವೆಯಾದಾಗ ಪೋರ್ಷಿಯ ಅವನಿಗೆ ಕೊಟ್ಟಿದ್ದ ಉಂಗುರವು ಕಾಣಿಸಿತು. ಬಸಾನಿಯೊನನ್ನು ಸ್ವಲ್ಪ ತಮಾಷೆ ಮಾಡಬೇಕೆಂದು ತರುಣ ವಕೀಲನು ಉಂಗುರವನ್ನು ಕೇಳಿದನು. ತರುಣ ವಕೀಲ ತನ್ನ ಹೆಂಡತಿಯೆಂದು ತಿಳಿಯದಿದ್ದ ಬಸಾನಿಯೊಗೆ ಉಂಗುರವನ್ನು ಕೊಡಲು ಒಪ್ಪಿಗೆಯಿರಲಿಲ್ಲ.





ಆದರೆ ತರುಣ ವಕೀಲನು ಬಸಾನಿಯೊನಿಂದ ಉಂಗುರವನ್ನು ಬಿಟ್ಟು ಮತ್ತೇನನ್ನೂ ತೆಗೆದುಕೊಳ್ಳಲು ಒಪ್ಪಲಿಲ್ಲ. ಆಗ ಆ್ಯಂಟೋನಿಯೊ, ಬಸಾನಿಯೊಗೆ, "ಅವನಿಗೆ ಉಂಗುರವನ್ನು ಕೊಟ್ಟುಬಿಡು ನಿನ್ನಲ್ಲಿ ನನಗಿರುವ ಪ್ರೀತಿ ಮತ್ತು ಈತನು ನನಗೆ ಮಾಡಿರುವ ಮಹದುಪಕಾರವನ್ನು ನಿನ್ನ ಹೆಂಡತಿಯ ಅಸಮಾಧಾನದೊಡನೆ ತೂಗಿ ನೋಡು," ಎಂದ.





ತನ್ನ ಗೆಳೆಯನಿಗೆ ಅಪಮಾನ ಮಾಡುವುದು ಬಸಾನಿಯೊಗೆ ಬೇಕಿರಲಿಲ್ಲ. ಆದುದರಿಂದ ಅವನು ಉಂಗುರವನ್ನು ಕೊಟ್ಟುಬಿಟ್ಟ.

ನೆರಿಸ್ಸ ಸಹ ಗ್ರೇಷಿಯಾನೊ ಜತೆಗೆ ತಮಾಷೆ ಮಾಡಿದಳು. ಅವಳು ಅವನ ಉಂಗುರವನ್ನು ಪಡೆದುಕೊಂಡಳು. ಆಸ್ಥಾನವನ್ನು ಬಿಡುವಾಗ ತಮ್ಮ ಗಂಡಂದಿರೊಡನೆ ಹೇಗೆ ತಮಾಷೆ ಮಾಡುವುದೆಂದು ಯೋಚಿಸುತ್ತ, ನಗುತ್ತ ಅವರು ಆಸ್ಥಾನದಿಂದ ಹೊರಟರು.



ಅವರು ಮನೆಗೆ ಹಿಂದಿರುಗಿದಾಗ ಪೋರ್ಷಿಯ ಮತ್ತು ನೆರಿಸ್ಸ ತಮ್ಮ ಎಂದಿನ ಉಡುಪನ್ನು ಧರಿಸಿ ತಮ್ಮ ಗಂಡಂದಿರು ಹಿಂದಿರುಗುವುದನ್ನೇ ಕಾಯುತ್ತಿದ್ದರು. ಸ್ವಲ್ಪ ಹೊತ್ತಿನಲ್ಲೇ ಬಸಾನಿಯೊ ಮತ್ತು ಗ್ರೇಷಿಯಾನೊ ಆ್ಯಂಟೋನಿಯೊ ಜೊತೆ ಹಿಂದಿರುಗಿದರು.





ಬಸಾನಿಯೊ ಆ್ಯಂಟೋನಿಯೊನನ್ನು ತನ್ನ ಹೆಂಡತಿಗೆ ಪರಿಚಯ ಮಾಡಿಕೊಡುತ್ತಿದ್ದಾಗ ಗ್ರೇಷಿಯಾನೊ ಮತ್ತು ನೆರಿಸ್ಸ ನಡುವೆ ವಿಪರೀತ ಜಗಳವಾಗುತ್ತಿದ್ದುದು ಕೇಳಿಸಿತು.

ಅವರ ವಿರಸಕ್ಕೆ ಕಾರಣವನ್ನು ಕೇಳಿದಾಗ ನೆರಿಸ್ಸ ತಾನು ಉಂಗುರವನ್ನು ಕೊಟ್ಟಾಗ,



ಏನಾದರೂ ಅದನ್ನು ತನ್ನಿಂದ ದೂರ ಮಾಡುವುದಿಲ್ಲ ಎಂದು ಹೇಳಿದ್ದ, ಆದರೆ ಗ್ರೇಷಿಯಾನೊ ಅದನ್ನು ಯಾವುದೋ ಗುಮಾಸ್ತನಿಗೆ ಕೊಟ್ಟುಬಿಟ್ಟಿದ್ದ ಎಂದು ಹೇಳಿದಳು. ತಾನು ಉಂಗುರವನ್ನು ಕೊಡಲೇಬೇಕಾಗಿ ಬಂದದ್ದು ಹೇಗೆ ಎಂದು ವಿವರಿಸಲು ಗ್ರೇಷಿಯಾನೊ ಪ್ರಯತ್ನಿಸಿದ ಮತ್ತು ಇಡೀ ಕಥೆಯನ್ನು ಅವರಿಗೆ ಹೇಳಿದ.

ಬಸಾನಿಯೊನನ್ನು ಒಂದಿಷ್ಟು ತಮಾಷೆ ಮಾಡಲು ಬಯಸಿದ ಪೋರ್ಷಿಯ

ಗ್ರೇಷಿಯಾನೊಗೆ ಏನೇ ಆಗಲಿ ಅವನು ಉಂಗುರವನ್ನು ಕೊಟ್ಟುಬಿಟ್ಟದ್ದು ತಪ್ಪು ಎಂದು ಕಟುವಾಗಿ ಹೇಳಿದಳು. ತನ್ನ ಗಂಡನು ಹೀಗೆ ಮಾಡುವುದೇ ಇಲ್ಲ ಎಂದು ಹೇಳಿದಳು. ಆದರೆ ತನ್ನ ಮೇಲೆ ಬರುತ್ತಿದ್ದ ಆಕ್ಷೇಪಣೆಯನ್ನು ತಪ್ಪಿಸಿಕೊಳ್ಳಲು ಗ್ರೇಷಿಯಾನೊ










ಮೊದಲು ಉಂಗುರವನ್ನು ಕೊಟ್ಟದ್ದು ಬಸಾನಿಯೊ, ತಾನೂ ಉಂಗುರವನ್ನು ಕೊಟ್ಟದ್ದಕ್ಕೆ ಅದೇ ಕಾರಣವೆಂದು ಹೇಳಿದ.

ಇದನ್ನು ಕೇಳಿ ತುಂಬಾ ಕೋಪಗೊಂಡವಳಂತೆ ಪೋರ್ಷಿಯ ನಟಿಸಿದಳು. ಬಸಾನಿಯೊ ಅವಳನ್ನು ಸಮಾಧಾನಗೊಳಿಸಲು ಪ್ರಯತ್ನಪಟ್ಟು ಇಡೀ ಕಥೆಯನ್ನು ಮತ್ತೆ ಹೇಳಿದ.

ಆದರೆ ಅವಳು ಅವನ ವಿವರಣೆ ತನಗೆ ಬೇಕಿಲ್ಲ ಎಂದಳು. ಈ ವಿರಸಕ್ಕೆ ತಾನೇ ಕಾರಣ, ತಾನು ಇಲ್ಲದೆ ಇದ್ದಿದ್ದರೆ ದಂಪತಿಗಳು ಹೀಗೆ ಜಗಳವಾಡುತ್ತಿರಲಿಲ್ಲ ಎಂದು ಆ್ಯಂಟೋನಿಯೊ ಬೇಸರಪಟ್ಟ. ಬಸಾನಿಯೊ ಇನ್ನು ಮುಂದೆ ಯಾವಾಗಲೂ ಅವಳಿಗೆ ನಿಷ್ಠನಾಗಿರುತ್ತಾನೆ,



ತಾನೇ ಅದಕ್ಕೆ ಹೊಣೆಗಾರನಾಗಿರುತ್ತೇನೆ ಎಂದು ಹೇಳಿದ.

ಆಗ ಪೋರ್ಷಿಯ ಆ್ಯಂಟೋನಿಯೊಗೆ ಒಂದು ಉಂಗುರವನ್ನು ಕೊಟ್ಟು, ಅದನ್ನು ತನ್ನ ಗೆಳೆಯನಿಗೆ ಕೊಟ್ಟು ಅವನು ಅದನ್ನು ಯಾರಿಗೂ ಕೊಡಕೂಡದೆಂದು ಹೇಳು ಎಂದು ಹೇಳಿದಳು. ಉಂಗುರವನ್ನು ನೋಡಿ ಬಸಾನಿಯೊ ಅಪ್ರತಿಭನಾದ, ಏಕೆಂದರೆ ತಾನು ತರುಣ ವಕೀಲನಿಗೆ ಕೊಟ್ಟ ಉಂಗುರ ಅದೇ. ಆ್ಯಂಟೋನಿಯೊ ಪರವಾಗಿ ವಾದಿಸಿ ಅವನ ಪ್ರಾಣವನ್ನುಳಿಸಿದ ಕಾನೂನಿನ ತಜ್ಞ







ತನ್ನ ಹೆಂಡತಿಯೇ ಎಂದು ಆಗ ಬಸಾನಿಯೊಗೆ ಅರ್ಥವಾಯಿತು. ಖುಷಿಯಾದ ದಂಪತಿಗಳು ಸಂತೋಷಪಡುತ್ತಿರುವಾಗಲೇ ಒಬ್ಬ ದೂತನು ಬಂದ. ಕಳೆದುಹೋಗಿದ್ದ ಆ್ಯಂಟೋನಿಯೊನ ಹಡಗುಗಳೆಲ್ಲ ಬಂದರಿಗೆ ಬಂದುವೆಂದು ಅವನು ಸುದ್ದಿ ತಂದ. ಆ್ಯಂಟೋನಿಯೊ ಮತ್ತೆ ಶ್ರೀಮಂತನಾದ!